## ಗೋಪಾಲಕೃಷ್ಣ ಕುಂಟಿನಿ



ಉಪ್ಪಿನಂಗಡಿ ಸಮೀಪದ ಕುಂಟಿನಿ ಎಂಬಲ್ಲಿ ವಾಸಿಸುತ್ತಿರುವ ಕಥೆಗಾರ ಗೋಪಾಲಕೃಷ್ಣ, ಓದಿದ್ದು ಬಿ.ಕಾಂ. ಬರಹದಲ್ಲಿ ಅಪಾರ ಆಸಕ್ತಿ ಹೊಂದಿದ್ದ ಇವರು ಕೃಷಿಯ ಜೊತೆ ಪತ್ರಿಕೋದ್ಯಮಕ್ಕೂ ಕಾಲಿಟ್ಟರು. ಹಲವಾರು ಪತ್ರಿಕೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದರು. ಮೂರು ವರ್ಷಗಳ ಹಿಂದೆ ಮಾಧ್ಯಮರಂಗಕ್ಕೆ ವಿದಾಯ ಹೇಳಿದ ಗೋಪಾಲಕೃಷ್ಣ, ಸದ್ಯಕ್ಕೆ ಪೂರ್ಣಪ್ರಮಾಣದ ಕೃಷಿಕರಾಗಿದ್ದಾರೆ. ಹವ್ಯಾಸಕ್ಕಾಗಿ ಕಥೆಕೂಟ ಎಂಬ ವಾಟ್ಸ್‌ಆ್ಯಪ್ ಗ್ರೂಪಿನ ಮುಖ್ಯಸ್ಥರಾಗಿ ಹೊಸಬರಿಂದ ಕತೆ ಹೇಳಿಸುವ, ಕತೆ ಬರೆಯುವುದನ್ನು ಕಲಿಸುವ ಕೆಲಸ ಮಾಡುತ್ತಿದ್ದಾರೆ. ಗೋಪಾಲಕೃಷ್ಣ ಹಲವಾರು ಪತ್ರಿಕೆಗಳಲ್ಲಿ ಅಂಕಣಗಳನ್ನು ಬರೆದಿದ್ದಾರೆ. ಅವರ 'ವೃತ್ತಾಂತ ಶ್ರವಣವು', 'ಆಮೇಲೆ ಇವನು' ಮತ್ತು 'ಅಪ್ಪನ ನೀಲಿಕಣ್ಣು' ಎಂಬ ಮೂರು ಕಥಾಸಂಕಲನಗಳು ಪ್ರಕಟವಾಗಿವೆ.

**ಚಿತ್ರ: ಡಿ.ಸಿ. ನಾಗೇಶ್**

ನೀಡದಿದ್ದರೆ ಅಷ್ಟೇನೂ ತೃಪ್ತಿಯಾಗುವುದಿಲ್ಲ. ಹುಡುಗಿ ತುಂಬಾ ಅಭಿಮಾನಕ್ಕಿಂತ ಹೆಚ್ಚಾಗಿ ಪ್ರಾಮಾಣಿಕತೆಯಿಂದ ಬರೆದಿದ್ದಳು. ಪತ್ರದ ಸಾರಾಂಶವೇ ಕಥೆಯ ಬಗ್ಗೆ ಅವಳಿಗಿರುವ ಅಜ್ಞಾನ ಮತ್ತು ಸಾಹಿತ್ಯದ ಬಗೆಗಿರುವ ಮುಗ್ಧತೆ. ಎಲ್ಲಕ್ಕಿಂತ ಹೆಚ್ಚಾಗಿ ಉರುಟು ಅಕ್ಷರಗಳಲ್ಲಿ ಆಕೆ ಹುದುಗಿಸಿದ್ದ ಯಾವುದೋ ಪ್ರೀತಿ, ಹುಡುಗ ಆಕೆ ಸಲ್ಲಿಸಿದ ಅಭಿಮಾನ ಇತ್ಯಾದಿಗಳಿಗೆ ಕೃತಜ್ಞತೆ ಹೇಳಿ, ತನ್ನ ಕಥೆ, ಅದು ಪಳಗಿದ ಬಗೆ ಇತ್ಯಾದಿಗಳನ್ನು ವಿವರಿಸಿ, ಅಷ್ಟೇ ಪ್ರೀತಿಯಿಂದ ಬರೆದ.

ಅಷ್ಟೇ ಸಾಕಾಯಿತು ಹುಡುಗಿಗೆ. ಹುಡುಗನನ್ನು ಯಾವನೋ ಮಹಾನ್ ವ್ಯಕ್ತಿ ಎಂದುಕೊಂಡಂತೆ ಕಂಡಳು. ಇಬ್ಬರೂ ಪರಸ್ಪರ ಕಂಡು ಕೇಳಿದವರಲ್ಲ. ಭೇಟಿಯಾದವರಲ್ಲ. ಯಾರಿಗೂ ಯಾರ ಕುಲಗೋತ್ರ ಗೊತ್ತಿಲ್ಲ. ಆದರೂ ಮೊದ ಮೊದಲಲ್ಲಿ ಪೆನ್ನು ಫ್ರೆಂಡುಗಳ ರೀತಿ ಗೆಳೆತನಕ್ಕೆ ತೊಡಗಿದರು. ಹುಡುಗಿ ಈ ಪ್ರಪಂಚದಲ್ಲಿ ಗೆಳೆತನವಿಲ್ಲದ್ದರೆ ಎಲ್ಲ ಹಡಗುಗಳೂ ಕಡಲಲ್ಲಿ ಮುಳುಗುವುದೆಂದು ಬರೆದಳು. ಹುಡುಗನಿಗೆ ಇದು ಸ್ವಲ್ಪ ಮೋಜೆನಿಸಿತು. ಬರೆಯದೇ ಕುಳಿತ. ಹುಡುಗಿ ಆಕ್ಷೇಪಿಸಿ ಬರೆದಳು. ಈ ನಿರುತ್ತರ ಹೆಣಭಾರ ಎಂದಳು. ನನ್ನ ಗೆಳೆತನವನ್ನು ನಿರಾಕರಿಸಬೇಡ ಎಂದು ಕೂಗಿದಳು.

ಹುಡುಗ ಅಷ್ಟಕ್ಕೇ ಹದಕ್ಕೆ ಬಂದ. ಎಲ್ಲ ಸಾವಧಾನಗಳನ್ನು ವಂಚಿಸುವ, ಅಕ್ಷರಗಳ ಆತ್ಮೀಯತೆಯ ಹಿಂದಿರುವ ಒಂದು ಹೃದಯವನ್ನು ನೋಯಿಸುವ ಕೆಲಸಕ್ಕೆ ಏಕಾದರೂ ತೊಡಗಬೇಕೆಂದು ಮತ್ತೆ ಬರೆಯತೊಡಗಿದ. ಹೇಗೆನ್ನುತ್ತೀರಿ? ಹುಡುಗ ವಿಶ್ವರೂಪವನ್ನೇ ತಾಳಿದ. ತನ್ನನ್ನು ಇಡೀ ತೆರೆದು ತೋರಿದ. ಬಾಯಗಲಿಸಿ ಗೋಕುಲ ತೋರಿದಂತೆ. ಮಹಿತೋ ಮಹಿಯಾತ್‌ಗೆ ಬೆಳೆದಂತೆ... ಒಂದು